Ghats Task Force. The Task Force has already initiated implementation of Programmes.

540 ಶ್ರೀ ರೋಷನ್ ಬೇಗ್.ಆರ್ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ 15 ಸಾವಿರ ಎಕರೆ ಜಮೀನಿನಲ್ಲಿ ಗಿಡ ನೆಡುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ಈ ಯೋಜನೆಗೆ ಅರಣ್ಯ ಇಲಾಖೆಯಿಂದ ಮಂಜೂರಾದ ಹಣ ಎಷ್ಟು;

ಇ) ಈ ಯೋಜನೆಗೆ ಇಲ್ಲಿಯವರೆಗೆ ಭಾರತ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) 2009–2010ನೇ ಸಾಲಿಗೆ ಕೇಂದ್ರ ಸರ್ಕಾರವು ನಿಗಧಿಪಡಿಸಿದ ಮೇರೆಗೆ 80,000 ಹೆ. ಪ್ರದೇಶದಲ್ಲಿ ಗಿಡ ನೆಡುವ ಯೋಜನೆಯನ್ನು ಹಮ್ಮಿಕೊಂಡಿದೆ.

ಆ) ಈ ಯೋಜನೆಗೆ ಸರ್ಕಾರವು ವಿವಿಧ ಯೋಜನೆಗಳಡಿಯಲ್ಲಿ ಒಟ್ಟು ರೂ. 22,595.70 ಲಕ್ಷ ಹಣವನ್ನು ಮಂಜೂರು ಮಾಡಿದೆ.

ಇ) ಕೇಂದ್ರ ಸರ್ಕಾರದ ರಾಷ್ಟ್ರೀಯ ಅರಣ್ಯೀಕರಣ ಯೋಜನೆಯಲ್ಲಿ ರೂ.151.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ರೂ.300.00 ಕೋಟಿಗಳ ಅನುದಾನವನ್ನು ಅರಣ್ಯ ಇಲಾಖಾ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರು ಮಾಡಲಾಗಿದೆ.

540 Sri Roshan Baig. R : Hon'ble Chief Minister kindly answer to the below question?

a) Is there any Project by the Government for Planting of trees in 15000 acres during 2009-10.

b) What is the amount sanctioned to the Forest Department for the above Project?

c) What is the amount released for this project by the Government of India so far?

Sri B.S.YEDDYURAPPA (Chief Minister) :

a) The Government of India has fixed a planting target of 80000 ha. for the year 2009-10. Accordingly action has been taken to achieve this target.

b) The Government has sanctioned Rs.22, 595.70 akhs under various schemes for implementing this project.

c) The Government of India has released Rs.151.00 lakhs under NAP-FDA and sanctioned Rs.300 crores under NREGS to execute forestry works.

541 ಶ್ರೀ ರೋಷನ್ ಬೇಗ್.ಆರ್ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಸೊಳ್ಳೆ ಸಂತತಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸೊಳ್ಳೆ ನಿಯಂತ್ರಣದ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೈಗೊಂಡ ಕ್ರಮಗಳೇನು;

ಆ) ಸೊಳ್ಳೆ ನಿಯಂತ್ರಣಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರತಿ ವರ್ಷ ಎಷ್ಟು ಹಣ ಖರ್ಚು ಮಾಡಿದೆ; 2005ರಿಂದ 2009ರವರೆಗೆ ವರ್ಷವಾರು ಮಾಹಿತಿಯನ್ನು ನೀಡುವುದು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಹೌದು.

1. ಪಾಲಿಕೆಯ ಪ್ರತಿ ಆರೋಗ್ಯ ವೈದ್ಯಾಧಿಕಾರಿಗಳ ವ್ಯಾಪ್ತಿಯಲ್ಲಿ ಸೊಳ್ಳೆ ನಿಯಂತ್ರಣಕ್ಕೆ ಎಂ.ಸಿ.ಗ್ಯಾಂಗ್‌ಮೆನ್‌ಗಳಿಂದ ಸೊಳ್ಳೆ ಲಾರ್ವಾ ನಾಶಕಗಳನ್ನು ಸಿಂಪಡಿಸಲಾಗುತ್ತಿದೆ. ಮುದ್ರಿತ ಗೊಂಡ ಕರಪತ್ರಗಳನ್ನು ನೀಡಿ, ಮಾಹಿತಿ ಶಿಕ್ಷಣ ಸಂಪರ್ಕದಡಿಯಲ್ಲಿ ಸೊಳ್ಳೆ ನಿಯಂತ್ರಣ ವಿಧಾನಗಳನ್ನು ತಿಳಿಸುವುದು ಅದರಲ್ಲಿ ಮುಖ್ಯವಾಗಿ Source Reduction ಅನ್ನು ನಿರಂತರವಾಗಿ ಮಾಡಿಸಲಾಗುತ್ತಿದೆ.
2. ವಾರಕ್ಕೂ ಮೇಲ್ಪಟ್ಟ ನೀರನ್ನು ಶೇಖರಣೆ ಮಾಡದಿರುವುದು.
3. ಪ್ರತಿಯೊಂದು ವಿಧಾನಸಭಾ ಕ್ಷೇತ್ರಗಳಿಗೆ ಹಿರಿಯ ಮೇಲುಸ್ತುವಾರಿ ಅಧಿಕಾರಿಗಳನ್ನು ನಿಯೋಜಿಸಿ, ಕಾರ್ಯಕ್ರಮದ ಪರಿವೀಕ್ಷಣೆ ಮಾಡಿಸಲಾಗುತ್ತಿದೆ.